ನಂತರದವರಿಗೆ ಇದು ಅನ್ವಯವಾಗುವುದಿಲ್ಲವೆಂದು ಸುಪ್ರೀಂ ಕೋರ್ಟ್ ಒಂದು ಸ್ಪಷ್ಟವಾದ ತೀರ್ಪು ಕೊಟ್ಟಿದೆ. ಆದರೆ ಈ ತೀರ್ಪಿನ ಪ್ರಕಾರ ಕೆಲವರು ಈ ವ್ಯಾಪ್ತಿಗೆ ಒಳಪಡುತ್ತಾರೆ. 1984ರ ಹಿಂದೆ ದಿನಗೂಲಿ ನೌಕರರಾಗಿದ್ದಂಥವರನ್ನು ಖಾಯಂ ಮಾಡಲೇಬೇಕಾಗುತ್ತದೆ. ಇದು ಕಷ್ಟವೆಂದು ಹೇಳಿ ಮಾಡದೇ ಇರುವುದಕ್ಕೆ ಸಾಧ್ಯವಿಲ್ಲ. ಎರಡನೆಯದು, ದಿನಗೂಲಿ ನೌಕರರು ಇವತ್ತು ಜಕ್ಕರಾಯನ ಕೆರೆಯ ಅಂಗಳದಲ್ಲಿ ಕುಳಿತುಕೊಂಡಿದ್ದಾರೆ, ಇವತ್ತು ವಿಧಾನ ಸೌಧದ ಸುತ್ತಲು ಪೋಲೀಸ್ ಬಂದೋಬಸ್ತು ಇದೆ. ನಾನು ಬೆಳಿಗ್ಗೆ 5 ಗಂಟೆಗೆ ಎದ್ದು ವಾಕಿಂಗ್ ಬರುವಾಗ ಪೋಲೀಸ್‌ನವರು ಎಂಟ್ರೆನ್ಸ್‌ನಲ್ಲಿಯೇ ಬಿಡಲಿಲ್ಲ. ಇಲ್ಲಿ ವಾಕಿಂಗ್ ಮಾಡುವುದಕ್ಕೆ ಯಾರನ್ನು ಬಿಡುತ್ತಿಲ್ಲ. ಇಂಥ ಒಂದು ಗಂಭೀರವಾದ ಪರಿಸ್ಥಿತಿ ಇಲ್ಲಿ ಏಕೆ ನಿರ್ಮಾಣವಾಗಿದೆ?

ಶ್ರೀ ಪಿ.ಜಿ.ಆರ್. ಸಿಂಧ್ಯ : ಸುಮಾರು 25 ಸಾವಿರ ಜನರು ಸೇರಿದಂತಹ ಸಂದರ್ಭದಲ್ಲಿ ಇಲ್ಲಿನ ಕಾರ್ಯಕಲಾಪಗಳು, ಸರ್ಕಾರಿ ಕಛೇರಿಗಳು, ಸಾರ್ವಜನಿಕರ ಹಿತದೃಷ್ಟಿಯಿಂದ ಅನೇಕ ಕೆಲಸಗಳು ಇರುತ್ತದೆ, ಆ ದೃಷ್ಟಿಯಿಂದ ಇಲ್ಲಿ ಬಿಗಿ ಬಂದೋಬಸ್ತು ಮಾಡಿರುತ್ತಾರೆ. ಅದರ ಬಗ್ಗೆ ನಾನು ವಿಚಾರಿಸುತ್ತೇನೆ. ನಾನು ಇಲ್ಲಿ ಒಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಅದೇನೆಂದರೆ, ಸುಪ್ರೀಂಕೋರ್ಟ್ ಆಗಲಿ ಅಥವಾ ಹೈಕೋರ್ಟ್ ಆಗಲಿ ಈ ವಿಚಾರ ಮೇಲೆ ಕೊಟ್ಟಿರತಕ್ಕಂಥ ತೀರ್ಪುಗಳನ್ನು ಯಾವುದು ಸಹಿತ ಸರ್ಕಾರ ಇದುವರೆಗೂ ಉಲ್ಲಂಘನೆ ಮಾಡಿಲ್ಲ.

ಶ್ರೀ ಶ್ರೀರಾಮರೆಡ್ಡಿ: ಉಲ್ಲಂಘನೆ ಮಾಡಿದ್ದೀರಾ ಎಂದು ನಾನು ಹೇಳಲಿಲ್ಲ.

ಶ್ರೀ ಪಾಟಾಳ್‌ನಾಗರಾಜ್: ಮೂರು ದಿವಸದಿಂದ ದಿನಗೂಲಿ ನೌಕರರ ಅಧ್ಯಕ್ಷರನ್ನು ಕರೆದು ಮಾತನಾಡಲಾಗಿದೆ, ಆದರೂ ಕೂಡ ಅವರಿಗೆ ಅನುಕೂಲ ಮಾಡತಕ್ಕಂಥ ಪರಿಸ್ಥಿತಿಯಲ್ಲಿಲ್ಲ ಎನ್ನತಕ್ಕಂಥ ಅರ್ಥದಲ್ಲಿ ತಾವು ಉತ್ತರ ಕೊಟ್ಟಿದ್ದೀರಿ. ಮಾತುಕತೆ ಆಡುವಾಗ ಯಾವುದಾದರು ಅನುಕೂಲವಾಗುವಂತದ್ದು ಫಲಪ್ರದವಾಗ ಬೇಕಲ್ಲ. ಅನೇಕರು ಕೇಳತಕ್ಕಂಥ ಎಲ್ಲಾ ಬೇಡಿಕೆಗಳನ್ನು ಈಡೇರಿಸುವುದಕ್ಕೆ ಆಗದೇ ಇದ್ದರೆ, ಇವರಲ್ಲಿ ಅನೇಕ ಜನರಿಗೆ ವಯಸ್ಸು ಮೀರಿರುವುದರಿಂದ ಬೇರೆ ಕಡೆಗೆ ಕೆಲಸಕ್ಕೆ ಸೇರುವುದಕ್ಕೆ ಅರ್ಜಿಗಳನ್ನು ಹಾಕುವುದಕ್ಕೆ ಅವಕಾಶ ಇಲ್ಲ. ಅನೇಕ ಜನರು ಮದುವೆಗಳಾಗಿ ಬಹಳ ತೊಂದರೆಯಲ್ಲಿದ್ದಾರೆಂದು ತಮಗೆ ಗೊತ್ತಿದೆ. ಕರುಣೆಯಿಂದ, ವಿಶ್ವಾಸದಿಂದ ಅವರನ್ನು ಕರೆದು ಮಾತನಾಡಿ ಅವರಿಗೆ ಅನುಕೂಲ ಮಾಡಿಕೊಡಬೇಕು. ಅವರಿಗೆ ಅನುಕೂಲಮಾಡುವಂತಹ ರೀತಿಯಲ್ಲಿ ಮಾತನಾಡುತ್ತೇವೆಂದು ಈ ಸಂದರ್ಭದಲ್ಲಿ ಭರವಸೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ವಿವಿಧ ಇಲಾಖೆಗಳಲ್ಲಿ ಕೆಲಸ ಮಾಡುವ ದಿನಗೂಲಿ ನೌಕರರ ಕೆಲವರಿಗೆ ಮೊಮ್ಮಕ್ಕಳು ಇದ್ದಾರೆ, ಅದೆಲ್ಲಾ ವಾಸ್ತು ಅಂಶ. ಇವರ ಸಮಸ್ಯೆಗಳ ಬಗ್ಗೆ ಸರ್ಕಾರ ಸಹಾನುಭೂತಿ ಇದೆ ಎಂಬುದನ್ನು ಹೇಳುತ್ತೇನೆ. ಮತ್ತೆ ಅವರ ಜೊತೆ ಮಾತುಕತೆಯನ್ನು ಮುಂದುವರಿಸುತ್ತೇವೆ.

**(ಚ) ಬೆಂಗಳೂರಿನ ಕೃಷಿ ವಿದ್ಯಾನಿಲಯದಲ್ಲಿ 1996ನೇ ಇಸವಿಯ ಜಾಹಿರಾತು ಪ್ರಕಾರ ಆಡಳಿತ ಸಹಾಯಕರ ಹುದ್ದೆಗಳ ಅರ್ಜಿ ಕುರಿತು.**

+ಶ್ರೀ ಪಾಟಾಳ್ ನಾಗರಾಜ್ (ಚಾಮರಾಜನಗರ) : ಬೆಂಗಳೂರು ಕೃಷಿ ವಿಶ್ವವಿದ್ಯಾಲಯದಲ್ಲಿ 1996ನೇ ಇಸವಿಯ ಜಾಹೀರಾತು ಪ್ರಕಾರ ಸಹಾಯಕರ ಹುದ್ದೆಗಳಿಗೆ ಅರ್ಜಿಯನ್ನು ಆಹ್ವಾನಿಸಲಾಗಿದೆ.

ಕೇವಲ 25 ಜನ ಅಡಳಿತ ಸಹಾಯಕತ ಹುದ್ದೆಗೆ 2,000 ಅರ್ಜಿದಾರರಿಗೆ ಸಂದರ್ಶನ ಮಾಡಲಾಗಿದೆ. ಒಂದು ಹುದ್ದೆಗೆ 10ರಂತೆ ಸಂದರ್ಶನ ಕರೆದರೆ ಅದೊಂದು ಒಳ್ಳೆಯ ಸಂಪ್ರದಾಯ. ಅಥವಾ 25 ಹುದ್ದೆಗಳಿಗೆ 200 ಜನರನ್ನು ಸಂದರ್ಶನಕ್ಕೆ ಕರೆದಿದ್ದರೆ ಪರವಾಗಿರಲಿಲ್ಲ. ಹಾಗೆಯೆ ಶೇಕಡ 10ರಷ್ಟು ಗ್ರಾಮೀಣ ಕೃಪಾಂಕ ಮತ್ತು ಮಹಿಳೆಯರಿಗೆ ಶೇಕಡ 30ರಷ್ಟು ಕೊಡಬೇಕಾದದ್ದನ್ನು ಮರೆತಿದ್ದಾರೆ. ಸುಮಾರು, ಎಲ್ಲ ನೀತಿ ನಿಯಮಗಳನ್ನು ಗಾಳಿಗೆ ತೂರು, 2000 ಜನರನ್ನು ಸಂದರ್ಶನಕ್ಕೆ ಕರೆದು, 25 ಜನರನ್ನು ಮಾತ್ರ ಕೆಲಸಕ್ಕೆ ತೆಗೆದುಕೊಳ್ಳತಕ್ಕಂಥದ್ದು ಇದು ಭಾರಿ ತೀವ್ರವಾದ ಅನ್ಯಾಯ, ಮತ್ತೆ ಇದರ ಬಗ್ಗೆ ಪುನರ್ ಪರಿಶೀಲನೆ ಮಾಡಬೇಕು. ಇದನ್ನು ಎಲ್ಲಾ ವಜಾ ಮಾಡಬೇಕು, ಮತ್ತೆ ಅರ್ಜಿ ಕರೆಯುಲು ಕೆಲಸಕ್ಕೆ ಹೋಗಬೇಕು. ಇಲ್ಲದಿದ್ದರೆ ತೀವ್ರವಾದಂಥ ಅನ್ಯಾಯ ನಡೆಯುತ್ತಿದೆ. ಪ್ರಾಮಾಣಿಕರಿಗೆ ಇಲ್ಲಿ ಕೆಲಸ ದೊರಕುವುದಿಲ್ಲ. ಇದರಲ್ಲಿ ಭಷ್ಟಾಚಾರ ಆಗುತ್ತದೆ ಎನ್ನುವ ಮಾತನ್ನು ತಮಗೆ ಇಲ್ಲಿ ಹೇಳುತ್ತಿದ್ದೇನೆ. ಹಿಂದೆ ಎಂ.ಎಸ್.ವಿ.ಕೆ.ನಲ್ಲಿ ಕೆಲಸಕ್ಕೆ ಸೇರುವಾಗ ಬಹಳ ಅನ್ಯಾಯ ನಡೆದಿರತಕ್ಕಂಥದ್ದು ಇದು ಕೃಷಿ ವಿಶ್ವವಿದ್ಯಾನಿಲಯದಲ್ಲಿ ನಡೆದಿದೆ. ಅದೇ ಅನ್ಯಾಯ ಇವತ್ತು ಉದ್ಯೋಗ ಕೊಡುವ ರೀತಿಯಲ್ಲಿ ಪುನರಾವರ್ತನೆ ಆಗುತ್ತಿದೆ. ಇದನ್ನು ತಡೆಹಿಡಿದು ತಾವು ಈ ಅರ್ಜಿಯನ್ನು ವಜಾ ಮಾಡಿ ನೀವು ಮತ್ತೆ ಅರ್ಜಿ ಕರೆಯುವ ವ್ಯವಸ್ಥೆ ಮಾಡುತ್ತೀರೆಂದು ಹೇಳಿ ತಮ್ಮ ಮೂಲಕ ಮಾನ್ಯ ಕೃಷಿ ಸಚಿವರನ್ನು ಹಾಗೂ ಸರ್ಕಾರವನ್ನು ಕೇಳುತ್ತಿದ್ದೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಅಲ್ಲಿ 25 ಹುದ್ದೆಗಳ ಖಾಲಿ ಇದ್ದರೆ 2,000 ಜನಕ್ಕೆ ಸಂದರ್ಶನ ಕಳುಹಿಸಿಕೊಟ್ಟಿದ್ದಾರೆ, ಅದು ಭಾರಿ ಅವ್ಯವಹಾರಕ್ಕೆ ಎಡೆ ಮಾಡಿಕೊಡುತ್ತದೆ. ಆ 2,000 ಜನಕ್ಕೆ ಕೇವಲ 25 ಹುದ್ದೆಗಳಿಗೆ ಯಾವ ಅಧಿಕಾರಿ ತೀರ್ಮಾನ ತೆಗೆದುಕೊಂಡು ಆ 2,000 ಜನಕ್ಕೆ ಸಂದರ್ಶನಕ್ಕೆ ಕಳುಹಿಸಿರುತ್ತಾರೆ. ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು, ಏನು ಕ್ರಮ ತೆಗೆದುಕೊಳ್ಳುತ್ತೀರೆಂದು ಮಾನ್ಯ ಕೃಷಿ ಸಚಿವರು ಹೇಳಬೇಕು.

ಶ್ರೀ ಸಿ. ಬೈರೇಗೌಡ (ಕೃಷಿ ಸಚಿವರು): ಮಾನ್ಯ ಉಪಾಧ್ಯಕ್ಷರೆ, ಮಾನ್ಯ ವಾಟಾಳ್‌ನಾಗರಾಜ್ ರ ರು ಮತ್ತು ಶ್ರೀರಾಮರೆಡ್ಡಿಯವರು ಎತ್ತಿರತಕ್ಕಂಥ ಪ್ರಶ್ನೆಗೆ ಉತ್ತರ ಈ ರೀತಿಯಾಗಿ ಇದೆ. ಬೆಂಗಳೂರು ಕೃಷಿವಿದ್ಯಾನಿಲಯದಲ್ಲಿ ಖಾಲಿ ಇರುವ ಹುದ್ದೆಗಳು 25 ಅಲ್ಲ, ಕೇವಲ 12 ಮಾತ್ರ, ಈ ಸಹಾಯಕ ಹುದ್ದೆಗಳಿಗೆ ಜೂನ್ 1996ರಲ್ಲಿ ಅರ್ಜಿಗಳನ್ನು ಕರೆಯಲಾಗಿತ್ತು, ಈ ಹುದ್ದೆಗಳಿಗಾಗಿ ಕೆಲಸಕ್ಕೆ ದಿನಾಂಕ:22-2-1999ರಿಂದ 15-3-1999ರವರೆಗೆ ಸಂದರ್ಶನವನ್ನು ನಡೆಸಲಾಗಿದೆ. ಸದರಿ ಹುದ್ದೆಗಳಿಗೆ ಒಟ್ಟು 1,888 ಅರ್ಜಿಗಳು ಬಂದಿದ್ದು, ಇದರಲ್ಲಿ 1,787 ಅಭ್ಯರ್ಥಿಗಳಿಗೆ ಸಂದರ್ಶನವನ್ನು ಕರೆಯಲಾಗಿತ್ತು. ಇದರಲ್ಲಿ 1,260 ಅಭ್ಯರ್ಥಿಗಳು ಸಂದರ್ಶನಕ್ಕೆ ಹಾಜರಾಗಿದ್ದು 527 ಅಭ್ಯರ್ಥಿಗಳು ಗೈರು ಹಾಜರಾಗಿರುತ್ತಾರೆ. ನೇಮಕಾತಿಯ ನಿಯಮಗಳನ್ನು ಅನುಸರಿಸಿಯೇ ಸಂದರ್ಶನವನ್ನು ನಡೆಸಲಾಗಿದೆ; ಎಂದು ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ಕುಲ ಸಚಿವರು ವರದಿ ಮಾಡಿರುತ್ತಾರೆ. ಹಾಗೂ ಸಂದರ್ಶನದಲ್ಲಿ ನೀಡಿರುವ ವಿವರ ಈ ಕೆಳಕಂಡಂತೆ ಇರುತ್ತದೆ. ನಿಗದಿ ಪಡಿರುವ ವಿದ್ಯಾರ್ಹತೆ ಜಾಸ್ತಿ ಇರುವ ವಿದ್ಯಾರ್ಥಿಗಳ, ವಿದ್ಯಾರ್ಹತೆಗೆ 20 ಅಂಕಗಳು, ನಿಗದಿ ಪಡಿಸಿರುವ ಅನುಭವಕ್ಕಿಂತ ಹೆಚ್ಚು ಅನುಭವಕ್ಕೆ 30 ಅಂಕಗಳು. ವ್ಯಕ್ತಿತ್ವಕ್ಕೆ 10 ಅಂಕಗಳು. ಅಭ್ಯರ್ಥಿಯ ಸಾಧಾರಣ ಕೆಲಸಕ್ಕೆ ಕೊಡುಗೆಯಾಗಿ 10ಅಂಕಗಳು. ಸಂದರ್ಶನದಲ್ಲಿ ಅಭ್ಯರ್ಥಿಗೆ ಅವನ ನಡವಳಿಕೆಗೆ 30 ಅಂಕಗಳು. ಈ ರೀತಿಯಾಗಿ ನಡವಳಿಕೆಯನ್ನು ವಿಭಜನೆ ಮಾಡಿ ಸಂದರ್ಶನವನ್ನು ನಡೆಸಿರುತ್ತಾರೆ. ಇವರ ವರದಿಯಂತೆ ಗ್ರಾಮೀಣ

ಅಭ್ಯರ್ಥಿಗಳಿಗೆ 10 ಕೃಪಾಂಕವನ್ನು ಕೊಡಬೇಕಾಗಿತ್ತು, ನಮ್ಮ ಸಾಮಾನ್ಯ ನಿಯಮಗಳ ಪ್ರಕಾರ. ದು ಅಲ್ಲದೇ ಮಹಿಳೆಯರಿಗೆ ಮೀಸಲಾತಿಯನ್ನು ನಮ್ಮ ಎಲ್ಲ ನೇಮಕಾತಿ ನಿಯಮದಂತೆ ಕೊಡಬೇಕಾದದ್ದು, ನಮ್ಮ ಸರ್ಕಾರದ ನಿಯಮ ಪ್ರಕಾರ ಇರುತ್ತದೆ. ಆದರೆ ಇದು ಒಂದು ಕೃಷಿ ವಿಶ್ವವಿದ್ಯಾನಿಲಯ, ಇದು ಒಂದು ಸ್ವಾಯತ್ ಸಂಸ್ಥೆಯಾಗಿರುವುದರಿಂದ ನಿರ್ಧಾರಗಳನ್ನು ತೆಗೆದುಕೊಳ್ಳತಕ್ಕಂಥ ಅಧಿಕಾರ ಆ ವಿಶ್ವವಿದ್ಯಾನಿಲಯಕ್ಕೆ ಇರುತ್ತದೆ. ಆ ಆಧಾರದ ಮೇಲೆ ಇದನ್ನು ಮಾಡಿರುತ್ತಾರೆ. ಆದರೂ ಸಹ ಇದರಲ್ಲಿ ಶೇಕಡಾ 10 ಕೃಪಾಂಕಗಳನ್ನು ಗ್ರಾಮೀಣ ಅಭ್ಯರ್ಥಿಗಳಿಗೆ ನೀಡದೆ ಇರತಕ್ಕಂಥದ್ದು ಮತ್ತು ಮಹಿಳೆಯರಿಗಾಗಿ ಮೀಸಲಾತಿ ನೀತಿ ಇರತಕ್ಕಂಥದ್ದು ಇದೆ. ಇದು ನನಗೂ ಕೂಡ ಆಶ್ಚರ್ಯವಾಗಿದೆ.

**( ಈ ಹಂತದಲ್ಲಿ ಮಾನ್ಯ ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು)**

ತಾವು ಏನು ಒತ್ತಾಯ ಮಾಡಿರುತ್ತೀರಿ, ಕರೆದಿರತಕ್ಕಂಥ, ಸಂದರ್ಶನವನ್ನು ರದ್ದು ಮಾಡಿ ಮತ್ತೆ ಹೊಸದಾಗಿ ಸಂದರ್ಶನವನ್ನು ಏರ್ಪಾಡು ಮಾಡಬೇಕು ಎನ್ನತಕ್ಕಂಥದ್ದು. ಕೃಷಿ ವಿಶ್ವವಿದ್ಯಾನಿಲಯ ಒಂದು ಸ್ವಾಯತ್ತೆ ಸಂಸ್ಥೆಯಾಗಿರುವುದರಿಂದ ನಾವು ಈ ರೀತಿಯಾದಂಥ ಒಂದು ಪತ್ರವನ್ನು ಸರ್ಕಾರದಿಂದ ಕೃಷಿ ವಿಶ್ವವಿದ್ಯಾನಿಲಯಕ್ಕೆ ಬರೆದು, ಈ ನ್ಯೂನತೆಗಳನ್ನು ತಾವು ಏನು ಎಚ್ಚರಿಸಿರುತ್ತೀರ ಈ ನ್ಯೂನತೆಗಳನ್ನು ಸರಿಪಡಿಸಿ ಪುನಃ ಸಂದರ್ಶನವನ್ನು ಕರೆಯುವ ಏರ್ಪಾಡು ಮಾಡತಕ್ಕಂಥ ರೀತಿಯಲ್ಲಿ ಸರ್ಕಾರದಿಂದ ಕೃಷಿ ವಿಶ್ವವಿದ್ಯಾನಿಲಯಕ್ಕೆ ಪತ್ರವನ್ನು ಬರೆಯುತ್ತೇವೆ ಎನ್ನತಕ್ಕಂಥದ್ದನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಶ್ರೀಮತಿ ಪ್ರಮೀಳಾ ನೇಸರ್ಗಿ: ತಾವು ಅಲ್ಲಿಯೇ ಇದ್ದೀರಲ್ಲಾ, ತಾವು ಇನ್ನೊಂದು ಬೇರೆ ಪತ್ರವನ್ನು ಬರೆಯುವ ವಿಷಯ ಏನು ಇದೆ .

ಶ್ರೀ.ಸಿ. ಬೈರೇಗೌಡ : ವಿಶ್ವವಿದ್ಯಾನಿಲಯದ ಆಕ್ಟ್ ಪ್ರಕಾರ, ಸರ್ಕಾರದಿಂದ ಪತ್ರವನ್ನು ಬರೆದು ಅವರಿಗೆ ತಿಳಿಸಬೇಕಾಗುತ್ತದೆ. ಏಕೆಂದರೆ ಅದು ಒಂದು ಸ್ವಾಯತ್ತೆ ಸಂಸ್ಥೆ. ಅದರ ಸ್ವಾಯತ್ತೆತೆಯನ್ನು ಕಾಪಾಡಬೇಕಾಗುತ್ತದೆ. ನಾವು ಪದೇ ಪದೇ ಕೃಷಿ ವಿಶ್ವ ವಿದ್ಯಾನಿಲಯ ಇರಲಿ ಅಥವಾ ಯಾವುದೇ ವಿಶ್ವವಿದ್ಯಾನಿಲಯಕ್ಕೆ ತನ್ನದೇ ಆದ ಘನತೆ, ಗಾಂಭೀರ್ಯ ಎಲ್ಲವೂ ಕೂಡ ಇರುತ್ತದೆ. ಅದನ್ನು ನಾವು ಕಾಪಾಡಬೇಕಾಗುತ್ತದೆ. ಈಗ ಆಗಿರತಕ್ಕಂಥದ್ದನ್ನು ರದ್ದುಪಡಿಸಿ ಅಲ್ಲಿ ಈಗ ನಿಯಮಗಳು ತಿದ್ದುಪಡಿಯಾಗಿವೆ. ಅದು ನೇಮಕಾತಿಯ ಸಂದರ್ಭದಲ್ಲಿ ಇರಬಹುದು, ಅಥವಾ ಪ್ರವೇಶ ಸಂದರ್ಭದಲ್ಲಿ ಇರಬಹುದು ಏನು ಈ 30 ಅಂಕಗಳನ್ನು ಇಟ್ಟು ಕೊಂಡಿದ್ದಾರೆ. ಈ ಸಂದರ್ಶನಕ್ಕಾಗಿ ಇಟ್ಟುಕೊಂಡಿರುವ 31 ಅಂಕಗಳು ಇರಕೂಡದು ಅದರ ಬಗ್ಗೆ ತಿದ್ದುಪಡಿ ಮಾಡಬೇಕು. ತಿದ್ದುಪಡಿ ಮಾಡಬೇಕಾದಂಥ ಸೂಚನೆಯನ್ನು ಈಗಾಗಲೇ ನೀಡಲಾಗಿದ್ದು ಆ ರೀತಿಯಾದ ಅವರ ಕಾನೂನನ್ನು ಅವರು ಬದಲಾವಣೆ ಮಾಡಿಕೊಂಡಿದ್ದಾರೆ. ಅವರ ಆಧಾರದ ಮೇಲೆ ಹೇಳಬೇಕೆಂದರೆ: ಅದಕ್ಕೆ ಅರ್ಜಿಗಳನ್ನು 1996ರಲ್ಲಿ ಕರೆದಿರತಕ್ಕಂಥದ್ದು, ಸುಮಾರು 3 ವರ್ಷಗಳು ಆಗಿದೆ. ಹೊಸದಾಗಿ ತಿದ್ದುಪಡಿ ಆಗಿರುವುದರಿಂದ ನಿಯಮಗಳ ಪ್ರಕಾರ ಈ ಸಂದರ್ಶನ ಇಲ್ಲದೆ, ಕೇವಲ ಮೀಸಲಾತಿ ಮತ್ತು ನಮ್ಮ ರೋಸ್ಟರ್ ಹಾಗೂ ಮೆರಿಟ್ ಎರಡು ಆಧಾರದ ಮೇಲೆ ನಿಯಮಗಳನ್ನು ಮಾಡಬೇಕೆನ್ನುವ ರೀತಿಯಲ್ಲಿ ಪತ್ರವನ್ನು ಕೃಷಿ ವಿಶ್ವವಿದ್ಯಾನಿಲಯಕ್ಕೆ ನಾವು ಬರೆಯುತ್ತೇವೆ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ನ್ಯೂನತೆಗಳು ಏನು ಇವೆ ಎನ್ನುವುದು ನಿಮ್ಮ ಗಮನಕ್ಕೆ ತಂದಿರುತ್ತೇವೆ.

ಅಧ್ಯಕ್ಷರು : ನ್ಯೂನತೆಗಳ ಬಗ್ಗೆ ನೀವು ಅವರ ಗಮನಕ್ಕೆ, ಅವರು ನಿಮ್ಮ ಗಮನಕ್ಕೆ ತಂದಿರುತ್ತಾರೆ, ಅದು ನಮ್ಮ ಗಮನಕ್ಕೂ ಬಂದಿರುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಮಂತ್ರಿಯವರು ಬಹಳ ಕಳಕಳಿಯಿಂದ ಅದನ್ನು ಹೇಳಿದ್ದಾರೆ. ಇದಕ್ಕೆ ನನ್ನದು ಒಂದು ಸಲಹೆ, ಮಾನ್ಯ ಗೋವಿಂದೇಗೌಡರು ಪ್ರಾಥಮಿಕ ಶಿಕ್ಷಕರ ಆಯ್ಕೆಯಲ್ಲಿ ಮಾಡಿದಂತೆ ಈ ಕ್ಲರ್ಕ್ ಹುದ್ದೆಗೆ ಕೂಡ 10 ವೇಟೆಜ್ ಕೊಟ್ಟು ಅದನ್ನು ಸೇರಿಸಿ ಅದನ್ನು ಮೆರಿಟ್ ಪ್ರಕಾರ ಡಿಕ್ಲೇರ್ ಮಾಡಿ. ಶಿಫಾರಸ್ಸು ಏಕೆ ಬೇಕು, ಅದಕ್ಕೆ ಸಂದರ್ಶನ ಏಕೆ ಬೇಕು, ಅದಕ್ಕೆ ನೂರಾರು .... ಇಲ್ಲದಿದ್ದರೆ ಎಲ್ಲರೂ ಅದರಲ್ಲಿ ಕೈ ಯಾಡಿಸುತ್ತಾರೆ. ಶೇಕಡಾ 30 ಪ್ರೆಜೆಂಟ್ ಇರುವುದು ಬೇಡ. ಮತ್ತು ಅವರ ಫಿಸಿಕಲ್ ಮತ್ತು ಅವರ ನಡತೆ ನೋಡುವುದು ಬೇಡ.

ಶ್ರೀ ಸಿ. ಬೈರೇಗೌಡ : ಮಾನ್ಯ ವಿರೋಧ ಪಕ್ಷದ ನಾಯಕರು ಏನು ಸಲಹೆಯನ್ನು ಕೊಟ್ಟಿದ್ದಾರೆ ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆ. ಕೃಷಿ ವಿಶ್ವವಿದ್ಯಾನಿಲಯಕ್ಕೆ ಇವತ್ತೆ ಪತ್ರವನ್ನು ಬರೆದು ಕಳುಹಿಸಿ ಕೊಡುತ್ತೇನೆ.

ಅಧ್ಯಕ್ಷರು : ಈಗ ಬಜೆಟ್ ಮೇಲೆ ಚರ್ಚೆಯನ್ನು ಪ್ರಾರಂಭ ಮಾಡಿಸಬೇಕು. ಮಾನ್ಯ ಮುಖ್ಯಮಂತ್ರಿಗಳಿಂದ ಬಿ.ಪಿ.ಎಲ್.ಬಗ್ಗೆ ಹೇಳಿಕೆಯನ್ನು ಕೊಡಿಸಬೇಕಲ್ಲ. ಮಾನ್ಯ ಮುಖ್ಯಮಂತ್ರಿಗಳು ಹೇಳಿಕೆಯನ್ನು ಕೊಡಲಿಕ್ಕೆ ರೆಡಿಯಾಗಿದ್ದಾರೆ . ಮಾನ್ಯ ಮುಖ್ಯಮಂತ್ರಿಗಳು ಬಿ.ಪಿ.ಎಲ್.ಬಗ್ಗೆ ಹೇಳಿಕೆಯನ್ನು ಓದಿ ಬಿಡಿ.

4.50 ಪಿ.ಎಂ.

**8. ಸಚಿವರ ಹೇಳಿಕೆ**

ಶ್ರೀ ಜೆ .ಹೆಚ್ ಪಟೇಲ್ (ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೆ, ಬಿ.ಪಿ.ಎಲ್.ನೌಕರರಿಗೆ ಸಂಬಂಧಪಟ್ಟಂತೆ ಈ ಕೆಳಕಂಡ ಹೇಳಿಕೆಯನ್ನು ನೀಡಬಯಸುತ್ತೇನೆ. ಕರ್ನಾಟಕದಲ್ಲಿರುವ ಬಿಪಿಎಲ್ ಸಂಸ್ಥೆಯಡಿಯಲ್ಲಿ 12 ಘಟಕಗಳಿವೆ. ಈ ಸಂಸ್ಥೆಯು ಸುಮಾರು 25 ವರ್ಷಗಳಿಗೂ ಮಿಕ್ಕಿ ತನ್ನ ಉದ್ಯಮವನ್ನು ನಡೆಸಿಕೊಂಡು ಬಂದಿದೆ. ಈ ಕಂಪನಿಯಲ್ಲಿ ಎಲ್ಲಾ ಘಟಕಗಳಿಗೂ ಸೇರಿಕೊಂಡಂತೆ ಸುಮಾರು 6,336 ನೌಕರರಿದ್ದಾರೆ. ಈ ಎಲ್ಲಾ ಘಟಕಗಳಲ್ಲಿ 1998ರ ತನಕ ಆಡಳಿತ ವರ್ಗ ಹಾಗೂ ಕಾರ್ಮಿಕರ ಮಧ್ಯೆ ಸೌಹಾರ್ದಯುತ ಸಂಬಂಧವಿದ್ದು ಕೈಗಾರಿಕಾ ಶಾಂತಿ ಇತ್ತು. 10.6.98 ರಂದು ಒಂದು ಸಂಘವನ್ನು ಬಿ.ಪಿ.ಎಲ್ ಗ್ರೂಪ್ ಆಫ್ ವರ್ಕರ್ಸ್ ಯೂನಿಯನ್ ಎಂಬ ಹೆಸರಿನಲ್ಲಿ ಕೆಲವು ಕಾರ್ಮಿಕರು ಅಂದರೆ ಎಲೆಕ್ಟ್ರಾನಿಕ್ಸ್ ರಿಸರ್ಚ್ ಲಿಮಿಟೆಡ್ ಸಂಸ್ಥೆಗೆ ಕಾರ್ಮಿಕರು ದೇಶಾದ್ಯಂತ ಈ ಸಂಸ್ಥೆಗಳ ಬಿಪಿಎಲ್ ಘಟಕಗಳಲ್ಲಿ ಕೆಲಸ ನಿರ್ವಹಿಸುತ್ತಿದ್ದ ಕಾರ್ಮಿಕರ ಕಲ್ಯಾಣಕ್ಕಾಗಿ ಸಂಘವನ್ನು ರಚಿಸಿಕೊಂಡರು. ಸುಮಾರು 1000 ಕಾರ್ಮಿಕರು ಬೆಂಬಲವನ್ನು ಈ ಸಂಘವು ಪಡೆದಿದೆಯೆಂದು ಸರ್ಕಾರದ ಗಮನಕ್ಕೆ ಬಂದಿದೆ. Out of nearly 4164 workers the Union represent about 1000 workers. ಸಂಘವನ್ನು ರಚಿಸಿಕೊಂಡ ಕಾರ್ಮಿಕರು ತಮ್ಮ ಸಂಭದ ಮೂಲಕ 31-7-98ರಂದು ಕಾರ್ಮಿಕರು ಬೇಡಿಕೆಗಳ ಪಟ್ಟಿಯನ್ನು ಎಲ್ಲಾ ಘಟಕಗಳಿಗೂ ಅನ್ವಯವಾಗುವಂತೆ ಆಡಳಿತ ವರ್ಗದವರಲ್ಲಿ ಸಲ್ಲಿಸಿದರು. ಈ ಸಂಬಂಧ ಹಾಗೂ ಕಾರ್ಮಿಕರ ನಡತೆ ಪ್ರಶ್ನಿಸಿ ಆಡಳಿತ ವರ್ಗದವರು ಕೆಲವರನ್ನು